## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀದರ್‌ನ ಫ್ಲಾರೆನ್ಸ್ ನೈಟಿಂಗೇಲ್ ನರ್ಸಿಂಗ್ ಶಾಲೆಯ ಸ್ಥಾಪನೆಗೆ ಮಂಜೂರಾತಿ.

- - - - -

**ಓದಲಾಗಿದೆ:**

1. ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಪರಿಷತ್‌ನ ಪತ್ರ ಸಂಖ್ಯೆ: ಕೆಎನ್‌ಸಿ:1023:2000 ದಿನಾಂಕ 24-8-2001.
2. ಕಾರ್ಯದರ್ಶಿ, ಖಾನ ಎಜ್ಯುಕೇಷನ್ ಸೊಸೈಟಿ, ಬೀದರ್ ಇವರ ದಿನಾಂಕ 27-8-2002ರ ಬೀದರ್‌ನ ಖಾನ ಎಜ್ಯುಕೇಷನ್ ಸಂಘದ ಕಾರ್ಯದರ್ಶಿಯವರ ಪತ್ರ.
3. ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಎನ್‌ಆರ್‌ಸಿ:105:2002-03 ದಿನಾಂಕ 23-10-2002.

**ಪ್ರಸ್ತಾವನೆ:**

1. ತಾ. 28-4-2002ರ ಕರ್ನಾಟಕ ನರ್ಸಿಂಗ್ ಪರಿಷತ್‌ನ ಪತ್ರದಲ್ಲಿ ಬೀದರ್‌ನ ಖಾನ ಎಜ್ಯುಕೇಷನ್ ಸಂಘದ ವತಿಯಿಂದ ಫ್ಲಾರೆನ್ಸ್ ನೈಟಿಂಗೇಲ್ ನರ್ಸಿಂಗ್ ಶಾಲೆಯನ್ನು ಡಿಪ್ಲೊಮೋ ಇನ್ ಜನರಲ್ ನರ್ಸಿಂಗ್ ಕೋರ್ಸಿನೊಂದಿಗೆ ಸ್ಥಾಪಿಸಲು ಪರಿವೀಕ್ಷಣಾ ವರದಿ ಸ್ವೀಕೃತವಾಗಿತ್ತು. ಸ್ಥಾಪಿಸಲು ಉದ್ದೇಶಿಸಿರುವ ನರ್ಸಿಂಗ್ ಶಾಲೆಯು 150 ಹಾಸಿಗೆಗಳ ಆಸ್ಪತ್ರೆಯನ್ನು ಹೊಂದಿರಲಿಲ್ಲವೆಂದು, ಸ್ವಂತ ಕಟ್ಟಡವನ್ನೂ ಪಡೆದಿರಲಿಲ್ಲವೆಂದು ಹಾಗೂ ವಿವಿಧ ನರ್ಸಿಂಗ್ ಹೋಂಗಳನ್ನು ತೋರಿಸಲಾಗಿತ್ತು. ಭಾರತೀಯ ನರ್ಸಿಂಗ್ ಪರಿಷತ್ತಿನ ಹಾಗೂ ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ತಿನ ಸೂತ್ರಗಳಿಗೆ ಅನುಗುಣವಾಗಿಲ್ಲದ ಕಾರಣ ನರ್ಸಿಂಗ್ ಶಾಲೆಯನ್ನು ನಡೆಸಲು ಅದು ಸಕ್ಷಮ ಪ್ರಾಧಿಕಾರವಾಗಿಲ್ಲದ ಕಾರಣ ತಿರಸ್ಕರಿಸುವಂತೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ತಾ. 28-11-2001 ಸಂಖ್ಯೆ: ಆಕುಕ 182 ಎಂಎಂಇ 2001ರ ಸರ್ಕಾರಿ ಪತ್ರದಲ್ಲಿ ಅನುಮತಿಯನ್ನು ತಿರಸ್ಕರಿಸಲಾಗಿತ್ತು.

2. ನಂತರ ತಾ. 27-8-2002ರ ಮೇಲ್ಕಂಡ ಸಂಘದ ಪತ್ರದಲ್ಲಿ 2002-2003ನೇ ಶೈಕ್ಷಣಿಕ ವರ್ಷದಲ್ಲಿ ಮೇಲ್ಕಂಡ ನರ್ಸಿಂಗ್ ಶಾಲೆಯನ್ನು ಸ್ಥಾಪಿಸಲು ಮಂಜೂರಾತಿ ನೀಡುವಂತೆ ಕೋರಲಾಗಿತ್ತು. ತಾ. 19-9-2002ರ ಸರ್ಕಾರಿ ಪತ್ರದಲ್ಲಿ ಮೇಲ್ಕಂಡ ನರ್ಸಿಂಗ್ ಶಾಲೆಯನ್ನು ಪರಿವೀಕ್ಷಿಸಿ ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಸೂಚಿಸಲಾಗಿತ್ತು. ತಾ. 23-10-2002ರ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪತ್ರದಲ್ಲಿ ಪರಿವೀಕ್ಷಣಾ ವರದಿಯನ್ನು ಸಲ್ಲಿಸಿ ಮೇಲ್ಕಂಡ ನರ್ಸಿಂಗ್ ಶಾಲೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಪರಿವೀಕ್ಷಣಾ ವರದಿಯಲ್ಲಿ 2002-2003ನೇ ಶೈಕ್ಷಣಿಕ ವರ್ಷದಿಂದ 50 ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಮಂಜೂರಾತಿ ನೀಡಲು ಪರಿವೀಕ್ಷಣಾ ಸಮಿತಿಯು ಶಿಫಾರಸ್ಸು ಮಾಡಿತ್ತು.

**ಸರ್ಕಾರದ ಆದೇಶ ಸಂಖ್ಯೆ: ಆಕುಕ ೨೭೯ ಎಂಎಂಇ ೨೦೦೨,**
**ಬೆಂಗಳೂರು, ದಿನಾಂಕ ೧೬ನೇ ನವೆಂಬರ್ ೨೦೦೨**

3. ಬೀದರ್‌ನ ಖಾನ ಎಜ್ಯುಕೇಷನ್ ಸಂಘವು ಬೀದರ್‌ನಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಸ್ಕೂಲ್ ಆಫ್ ನರ್ಸಿಂಗ್‌ನ್ನು 50 (ಐವತ್ತು) ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಡಿಪ್ಲೊಮೋ ಇನ್ ಜನರಲ್ ನರ್ಸಿಂಗ್ ಕೋರ್ಸನ್ನು ಸ್ಥಾಪಿಸಲು 2002-2003ನೇ ಸಾಲಿನಿಂದ ಜಾರಿಗೆ ಬರುವಂತೆ ಮಂಜೂರಾತಿ

ನೀಡಲಾಗಿದೆ. **ಈ ಮಂಜೂರಾತಿಯು** ಈ ಕೆಳಕಂಡ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪೂರೈಸಬೇಕೆಂಬ ಷರತ್ತಿಗೊಳಪಟ್ಟಿರುತ್ತದೆ.

**ಷರತ್ತುಗಳು**

(1) ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ ಹಾಗೂ ಭಾರತೀಯ ನರ್ಸಿಂಗ್ ಪರಿಷತ್ತಿ ಅನುಮೋದನೆ ಪಡೆಯತಕ್ಕದ್ದು.

(2) ಭಾರತೀಯ ಶುಶ್ರೂಷಾ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನವರು ನಿಗದಿಪಡಿಸಿರುವ ಪಠ್ಯಕ್ರಮ ಮತ್ತು ಮಿಡ್‌ವೈಫ್ ಹಾಗೂ ನರ್ಸಿಂಗ್ ಪರೀಕ್ಷಾ ಮಂಡಳಿಯ ಕಾರ್ಯ ಯೋಜನೆಗಳನ್ನು ಪಾಲಿಸುವುದು.

(3) ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನವರು ಮತ್ತು ಭಾರತೀಯ ನರ್ಸಿಂಗ್ ಕೌನ್ಸಿಲ್‌ನವರು ನಿಗದಿಪಡಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

(4) ಭಾರತೀಯ ನರ್ಸಿಂಗ್ ಪರಿಷತ್ತಿನ ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

(5) ಸರ್ಕಾರದಿಂದ ಕರ್ನಾಟಕ ನರ್ಸಿಂಗ್ ಪರಿಷತ್ತಿನಿಂದ ಹಾಗೂ ಭಾರತೀಯ ನರ್ಸಿಂಗ್ ಪರಿಷತ್ತಿನಿಂದ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(6) ಈ ಸಂಸ್ಥೆಗಳಿಗೆ ಯಾವುದೇ ಕಾರಣಕ್ಕೂ ಸರ್ಕಾರದಿಂದ ಅನುದಾನ ನೀಡಲಾಗುವುದಿಲ್ಲ.

(7) ಸಂಸ್ಥೆಯವರು ಅರ್ಹರಾದ ವಿದ್ಯಾರ್ಹತೆಹೊಂದಿದ ಹಾಗೂ ಅನುಭವವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳತಕ್ಕದು.

(8) ನರ್ಸಿಂಗ್ ಮತ್ತು ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಪುಸ್ತಕ ಹಾಗೂ ನಿಯತಕಾಲಿಕೆಗಳೊಂದಿಗೆ ವಾಚನಾಲಯ ಸೌಲಭ್ಯವನ್ನು ಒದಗಿಸತಕ್ಕದ್ದು.

(9) ಕರ್ನಾಟಕ ರಾಜ್ಯದ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದು ಮತ್ತು ಶೇಕಡ ಐದು ಸ್ಥಾನಗಳನ್ನು ಮಾತ್ರ ಪುರುಷ ಅಭ್ಯರ್ಥಿಗಳಿಗೆ ಮೀಸಲಿಡುವುದು.

(10) ಸ್ವಂತ ಆಸ್ಪತ್ರೆ ಕಟ್ಟಡ ನಿರ್ಮಾಣ ಪ್ರಗತಿಯ ಬಗ್ಗೆ ಅನುಸರಣಾ ವರದಿಯನ್ನು ಸಲ್ಲಿಸುವುದು.

(11) ಕರ್ನಾಟಕ ನರ್ಸಿಂಗ್ ಪರಿಷತ್ತಿನ ಸ್ಥಳೀಯ ತನಿಖಾ ಸಮಿತಿಯು ನಿಗದಿಪಡಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(12) 2001ರ ಕರ್ನಾಟಕ ಡಿಪ್ಲೊಮೋ ಇನ್ ಜನರಲ್ ನರ್ಸಿಂಗ್, ಮಿಡ್‌ವೈಫರಿ/ಸೈಖಿಯಾಟ್ರಿ ನರ್ಸಿಂಗ್ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಯ ಉಪಬಂಧಗಳ ಅನುಸಾರವೇ ಅಭ್ಯರ್ಥಿಗಳ ಪ್ರವೇಶವನ್ನು ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

1. ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560009.
2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು, ಬೆಂಗಳೂರು-560009.
3. ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ಸೂರಿ ಅಪಾರ್ಟ್‌ಮೆಂಟ್, ನಂ.71, 6ನೇ ಎ-ಕ್ರಾಸ್, ಆನಂದರಾವ್ ಬಡಾವಣೆ, ಗಾಂಧೀನಗರ, ಬೆಂಗಳೂರು-560009.
4. ಅಧ್ಯಕ್ಷರು/ಕಾರ್ಯದರ್ಶಿ, ಖಾನ ಎಜ್ಯುಕೇಷನ್ ಸೊಸೈಟಿ, ಬೀದರ್-585 401.